ಮೈಸೂರ್ ತನಕ ಕಳಿಸಿ ಓದಿಸಿದೆ. ಅಪ್ಪನಿಗೆ ಟೀ ಕುಡಿದೆಯಾ ಅಂತ ಕೇಳಲ್ಲ. ನಾಯಿಗೆ ಹಾಲು ಹಾಕಿದಿರಾ ಅಂತ ವಿಚಾರಿಸ್ತಾನೆ. ನಾಲಾಯಕ್ ನನ್ನಮಗ!'

ನಮ್ಮ ಬಡಾವಣೆಯ ಪ್ರಭಾವಶಾಲಿ ವ್ಯಕ್ತಿಗಳು ಜಿಲ್ಲಾ ಪೊಲೀಸ್ ಅಧಿಕಾರಿಗೆ ಅಹವಾಲು ಸಲ್ಲಿಸಿದ್ದರಿಂದ ಪೊಲೀಸರು ಗೈದ ಬಂದೋಬಸ್ತಿನಿಂದಲೊ, ಕೆಲವರು ಅಕಸ್ಮಾತ್ ದಸ್ತಗಿರಿ ಆಗಿದ್ದರಿಂದಲೊ, ಕಳ್ಳರಕಾಟ ಕ್ರಮೇಣ ಕ್ಷೀಣಗೊಂಡು ಒಂದು ದಿನ ನಿಂತೇ ಹೋಯಿತು. ನಮ್ಮ ಶ್ವಾನದಳ ಕಂಡು ಅಂಜಿಯೇ ಕಳ್ಳರು ಬೇರೆ ಪ್ರದೇಶಕ್ಕೆ ವಲಸೆ ಹೋದರು ಎಂದು ನನ್ನ ದೃಢ ನಂಬಿಕೆ. ಅಷ್ಟು ಹೊತ್ತಿಗೆ ನಾಯಿಗಳು ತಮ್ಮ ತಮ್ಮ ಮನೆಯ ಅಧಿಕೃತ ಪೌರತ್ವ ಪಡೆದು ಭದ್ರವಾಗಿ ಸ್ಥಾಪಿತವಾಗಿದ್ದವು. ನಾವು ಮಿಟ್ಟುವನ್ನು ಹೊರಹಾಕುವ ಪ್ರಶ್ನೆಯೇ ಬರಲಿಲ್ಲ. ಅದಿಲ್ಲದೆ ನಮ್ಮ ಬದುಕಿಗೆ ಏನರ್ಥ ಎಂಬಂತಾಗಿತ್ತು. ವರ್ಷ ಕಳೆದಿರಬೇಕು. ಮೈ ತುಂಬಿಕೊಂಡ ಮಿಟ್ಟು ಪ್ರಾಯಕ್ಕೆ ಬಂದಿತು. ಅದರ ಪ್ರಾಯದೊಂದಿಗೆ ನಮ್ಮ ಅಗ್ನಿಪರೀಕ್ಷೆಗಳು ಶುರುವಾದವು. ಮನೆಯ ಸುತ್ತ ಗಂಡುನಾಯಿಗಳು ಠಳಾಯಿಸತೊಡಗಿದವು. ನಾಯಿಗಳಿಗೆ ಸಾಮಾನ್ಯವಾಗಿ ಶ್ರಾವಣದಲ್ಲಿ ಬೆದೆ ಬರುತ್ತದೆ. ನಮ್ಮ ಏರಿಯಾ ಅಂತೂ ನಾಯಿಸಂತೆಯಾಗಿತ್ತು. ಮನೆಯತ್ತ ಸುಳಿವ ಗಂಡುನಾಯನ್ನು ಹೊಡೆದೋಡಿಸುವ ಕಾಯಕಕ್ಕೆ ಸಿದ್ಧತೆ ಮಾಡಿಕೊಂಡೆವು. ಮಕ್ಕಳು ಬೀದಿಕಲ್ಲನ್ನು ತಂದು ಕಾಂಪೌಂಡಿನ ಮೂಲೆಯಲ್ಲಿ ರಾಶಿಹಾಕಿದವು. ನಾಯಿಗಳೋ ಕಲ್ಲು ಕೈಗೆ ಬರುವುದರೊಳಗೆ ಎತ್ತರದ ಕಾಂಪೌಂಡನ್ನು ಚಂಗನೆ ನೆಗೆದು ಓಡುತ್ತಿದ್ದವು. ಕಾಮಾತುರಾಣಾಂ ನ ಗೋಡೆ ನ ಬೇಲಿ. ಮಲಗಿದರೆ ರಾತ್ರಿಯಿಡೀ ಕಹಳೆ ನುಡಿಸಿದಂತೆ ಹುಯಿಲು; ಕಾಯುವ ವಿಟರಲ್ಲೇ ಸಹನೆ ಕಳೆದುಹೋಗಿ ಭೀಕರ ಕಾದಾಟ. ಕೆಲವು ಕಿಟಕಿ ಬಾಗಿಲ ಕದವನ್ನು ಕೆರೆದು ಮಿಟ್ಟುವಿಗೆ ಪ್ರೇಮಸಂದೇಶ ರವಾನಿಸುವ ಯತ್ನವನ್ನೂ ಮಾಡಿದವು. ರಾತ್ರಿ ಯಾಕಾದರೂ ಬರುತ್ತಪ್ಪಾ ಅನಿಸುತ್ತಿತ್ತು. ನಮ್ಮದು ಕೆಎಸ್‌ಆರ್‌ಟಿಸಿ ನೌಕರರ ಬಡಾವಣೆ. ಕೆಟ್ಟರಸ್ತೆಗಳಲ್ಲಿ ಲಟಾರಿ ಸರ್ಕಾರಿ ಬಸ್ಸುಗಳನ್ನು ಓಡಿಸಿ ಸುಸ್ತಾಗಿ ಬರುತ್ತಿದ್ದ ಡ್ರೈವರುಗಳು, ರಾತ್ರಿ ತೊಟ್ಟು ಆನಂದವನ್ನು ಏರಿಸಿ, ರಾತ್ರಿ ಗಡದ್ದಾಗಿ ನಿದ್ದೆ ತೆಗೆಯಬಯಸುತ್ತಿದ್ದರು. ಅದು ಸಾಧ್ಯವಾಗದಿರಲು ಅವರೊಮ್ಮೆ ಸಹನೆ ಕಳೆದುಕೊಂಡು 'ನಿಮ್ಮ ನಾಯಿ ಕಡಿಂದ ಸಾಕಾಗಿದೆ ಕಂಡ್ರಿ. ಹಗಲೆಲ್ಲ ಡ್ಯೂಟಿ ಮಾಡಿ ದಣದು ಬಂದಿರ್ತೀವಿ. ನಿದ್ದಿ ಆಗದಿದ್ದರೆ ಹೆಂಗ?

